ನಮ್ಮ ಪ್ರತಾಪಸಿಂಹರೆಡ್ಡಿನ ತುಂಬಾ ಚೆನ್ನಾಗಿ ಮಾತನಾಡಿಸಿದನಂತೆ ಮತ್ತು ಒಂದು ಬಾಟಲ್ ರಕ್ತವನ್ನೂ ಸೀಕ್ರೆಟಾಗಿ ತರಿಸಿಕೊಟ್ಟರಂತೆ. ಮೂರು ರಾತ್ರಿಗಳಿಂದಲೂ ನಿದ್ದೆ ಮಾಡದ ಪ್ರತಾಪಸಿಂಹರೆಡ್ಡಿ ತನ್ನ ಸೆಲ್‌ನಲ್ಲಿ ಚೆನ್ನಾಗಿ ನಿದ್ದೆ ಮಾಡುತ್ತಿರುವನಂತೆ. ನಿಮ್ಮ ಫ್ರೆಂಡ್ ಕೃಷ್ಣ ಮನೋಹರ್ ರಾಜಮಹೇಂದ್ರಿಯ ಜೈಲು ಸೂಪರಿಂಟೆಂಡೆಂಟ್‌ಗೆ ಫೋನು ಮಾಡಿದ್ದರಂತೆ..." ಎಂದ ಆತನ ಮುಖದಲ್ಲಿ ಸಂತೃಪ್ತಿ ಮೂಡಿದಂತೆ ಅನ್ನಿಸುತ್ತಿತ್ತು.

"ಹೌದು, ನಾನು ಐದುವರೆಗೆ ಹೋದವನು ಸ್ವಲ್ಪ ಹೊತ್ತಿನ ಹಿಂದೆ ತಾನೇ ಬಂದೆ. ನನ್ನ ಎದುರಿಗೇ ಫೋನು ಮಾಡಿದ್ದ..." ಹೇಳಿದ್ದೆ ನಾನು.

"ನಿಮ್ಮ ಋಣ ಹೇಗೆ ತೀರಿಸಬೇಕೋ ತಿಳಿಯುತ್ತಿಲ್ಲ. ಹಿಂದೆ ಯಾವುದೋ ಜನ್ಮದಲ್ಲಿ ನೀವು ನಮ್ಮ ಹತ್ತಿರದ ಬಂಧುಗಳಾಗಿದ್ದಿರೇನೋ ಯಾರು ಬಲ್ಲರು..." ಆತ ಒಂದಿಷ್ಟು ಭಾವುಕರಾಗಿದ್ದರು.

"ಅಷ್ಟು ದೊಡ್ಡ ಮಾತೇಕೆ ಆಡುತ್ತೀರಿ. ಅದು ದೊಡ್ಡ ಕೆಲಸವೇನು ಅಲ್ಲ..." ನಾನು ಸಹಜವಾಗಿಯೇ ಹೇಳಿದ್ದೆ.

"ನಿಮಗೆ ಫಿಶ್ ಅಂದ್ರೆ ಇಷ್ಟಾನ..." ಕೇಳಿದ್ದರು ನರಸಿಂಹರೆಡ್ಡಿ. "ಹೌದು ನಿಮಗೆ ಹೇಗೆ ತಿಳಿಯಿತು..." ಅಚ್ಚರಿಯಿಂದ ಕೇಳಿದ್ದೆ. "ವೇಮುಲಶಾಸ್ತ್ರಿ ಹೇಳಿದ. ನೀವು ಎಂಟೂವರೆಗೆ ನನ್ನ ರೂಮಿಗೆ ಬನ್ನಿ. ನಮ್ಮ ಡಿಸ್ಟಲರಿಯಿಂದಲೇ ಫ್ರೆಶ್ ಸ್ಪೆಷಲ್ ಡ್ರಾಟ್ ಬಿಯರ್ ಬರ್ತಿದೆ. ಮತ್ತು ನನ್ನ ಗೆಳೆಯನ ಬ್ಲೂ ಸೀ ರೆಸ್ಟೋರೆಂಟ್‌ನಿಂದ ಮೂರ್ನಾಲ್ಕು ವೆರೈಟಿ ಫಿಶ್ ಹೇಳಿದ್ದೀನಿ. ಬ್ಲೂ ಸೀ ಹೈದರಾಬಾದ್‌ನ ಬೆಸ್ಟ್ ಸೀ ಫುಡ್ ರೆಸ್ಟೋರೆಂಟ್. ಅವುರ್ದು ಸ್ವಂತ ಮೂರ್ನಾಲ್ಕು ಫಿಶ್ಶಿಂಗ್ ಬೋಟ್ ಇದಾವೆ. ನಮ್ಮ ಕಂಪನಿಯಲ್ಲೆ ಲೀಜ್‌ಗೆ ಬಿಟ್ಟಿದ್ದಾನೆ" ಎಂದು ಎದ್ದು ತಮ್ಮ ರೂಮಿನೆಡೆ ಹೊರಟಿದ್ದರು. ಅವರು ಹೋದ ಕೂಡಲೇ ಬಾಗಿಲು ಮುಚ್ಚಿ ವಿಶ್ವನಾಥ ವೇಮುಲಶಾಸ್ತ್ರಿಗೆ ಫೋನು ಮಾಡಿದ್ದೆ. "ಸಾರಿ ಕಣಮ್ಮ

